# ಕೆ. ಸಚ್ಚಿದಾನಂದನ್ ಅವರ ಕೆಲವು ಕವಿತೆಗಳು

## ಪಾಪಾಸುಕಳ್ಳಿ

ಮುಳ್ಳುಗಳು ನನ್ನ ಭಾಷೆ,
ನನ್ನಿರುವಿಕೆಯನ್ನು ನಾನು
ರಕ್ತಬರಿಸುವ ಸ್ಪರ್ಶದಿಂದ ಘೋಷಿಸುತ್ತೇನೆ.

ಹಿಂದೊಮ್ಮೆ ಈ ಮುಳ್ಳುಗಳು ಹೂವಾಗಿದ್ದವು.
ವಂಚಿಸುವ ಪ್ರೇಮಿಗಳ ಕಂಡರೆ ನನಗೆ ಜುಗುಪ್ಸೆ,
ಕವಿಗಳು ನಾವಿರುವ ಮರುಭೂಮಿಯನ್ನು ತೊರೆದು
ಹೂದೋಟಗಳ ಕಡೆಗೆ ಪಯಣ ಬೆಳೆಸಿದ್ದಾರೆ;
ನನ್ನ ಮೊಗ್ಗುಗಳನೆಲ್ಲ ತುಳಿದು ಹೊಸಕಿ ಮಣ್ಣಾಗಿಸುತ್ತ
ಈಗ ಇಲ್ಲಿ ಉಳಿದಿರುವುದು ಒಂಟೆಗಳು ಮಾತ್ರ, ಜೊತೆಗಿಷ್ಟು ವರ್ತಕರು,

ಒಂದು ಅಮೂಲ್ಯ ನೀರಹನಿಗೆ ಒಂದು ಮುಳ್ಳು.
ನಾನು ಚಿಟ್ಟೆಗಳನ್ನು ಆಕರ್ಷಿಸುವುದಿಲ್ಲ,
ಯಾವ ಹಕ್ಕಿಯೂ ನನ್ನ ಹಾಡಿ ಹೊಗಳುವುದಿಲ್ಲ.
ನಾನು ಬರಗಾಲಕ್ಕೆ ಬಗ್ಗಿ ಸಾಯುವುದಿಲ್ಲ.

ಬೇರೆ ಬಗೆಯ ಚೆಲುವನ್ನು ಸೃಷ್ಟಿಸುತ್ತೇನೆ ನಾನು,
ಅದು ಬೆಳದಿಂಗಳಿನಾಚೆಗಿದೆ
ಕನಸುಗಳ ಮೀರಿ ಇದೆ.
ಅದರ ಭಾಷೆಯೇ ಬೇರೆ
ಅದು ಚೂಪಾದ, ಚುಚ್ಚುವ ಭಾಷೆ,
ಅದು ನಿಮ್ಮ ಭಾಷೆಗೆ
ಸಮಾನಾಂತರವಾದ ಭಾಷೆ.

**ಮೂಲ ಕವಿತೆಯ ಹೆಸರು:** Cactus **(ಕ್ಯಾಕ್ಟಸ್)**

## ಅಜ್ಜಿ

ನನ್ನಜ್ಜಿ ಹುಚ್ಚಿ.
ಅವಳ ಹುಚ್ಚು ಸಾವಾಗಿ ಮಾಗಿದಾಗ,
ನನ್ನ ಚಿಕ್ಕಪ್ಪ, ಜಿಪುಣ
ಅವಳನ್ನು ಹುಲ್ಲಿನಲ್ಲಿ ಸುತ್ತಿ
ಉಗ್ರಾಣದಲ್ಲಿರಿಸಿದ.

ಅಜ್ಜಿ ಒಣಗಿ, ಸಿಡಿದಳು;
ಅವಳ ಬೀಜಗಳು ಕಿಟಕಿಯಾಚೆ ಹಾರಿದವು.
ಸೂರ್ಯ ಬಂದ, ಆಮೇಲೆ ಮಳೆ ಬಂತು,
ಒಂದು ಬೀಜ ಮೊಳಕೆಯೊಡೆದು ಮರವಾಗಿ
ಬೆಳೆಯಿತು,
ಅದರ ಕಾಮ ನನ್ನ ಹಡೆಯಿತು.

ಚೆನ್ನದ ಹಲ್ಲಿನ ಕೋತಿಗಳ ಕುರಿತು
ನಾನು ಕವಿತೆ ಬರೆಯದೆ ಇರುವುದಾದರೂ ಹೇಗೆ?

**ಮೂಲ ಕವಿತೆಯ ಹೆಸರು:** Granny **(ಗ್ರ್ಯಾನಿ)**